# ಕಾಡಿನ ನಡುವೆ 'ನವ ನರಸಿಂಹ'ರ ಅಹೋಬಿಲ



**ಒಂದೆಡೆ ಕಾಡಿನ ರಮಣೀಯ ಸೌಂದರ್ಯ. ಇನ್ನೊಂದೆಡೆ ನರಸಿಂಹನ ರೌದ್ರ ಕಥನ. ರುದ್ರ ರಮಣೀಯತೆಯ ಅಪರೂಪದ ಸಮೀಕರಣ ಅಹೋಬಿಲಂನ ವಿಶೇಷ. ಆಸ್ತಿಕರ ಜೊತೆಗೆ ಸೌಂದರ್ಯೋಪಾಸಕರಿಗೂ ಸಾಹಸಪ್ರಿಯರಿಗೂ ಇಷ್ಟವಾಗುವ ಸ್ಥಳವಿದು.**

**■ ಅಮೃತ್ ಜೋಗಿ**

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಅಹೋಬಿಲ ಆಸ್ತಿಕರನ್ನೂ ಪರಿಸರ ಪ್ರಿಯರನ್ನೂ ಸೆಳೆಯುತ್ತಿರುವ ಪ್ರವಾಸಿ ತಾಣ. ಹೀಗೆ ಹೋಗಿ ಹಾಗೆ ಬರುವವರಿಗೆ ಇದು ಹೇಳಿ ಮಾಡಿಸಿದ ಸ್ಥಳವಲ್ಲ. ಸಾವಧಾನ ಹಾಗೂ ಕೊಂಚ ಸಾಹಸ ಪ್ರವೃತ್ತಿ ಎರಡೂ ಅಹೋಬಿಲ ದರ್ಶನಕ್ಕೆ ಬೇಕು.

'ಪೂರ್ತಿ ಅಹೋಬಿಲಂ ನೋಡಲು ಕನಿಷ್ಠ ಎರಡು ದಿನ ಬೇಕು. ಉಗ್ರಸ್ತಂಭಂ ಹತ್ತುವುದಾದರೆ ಒಂದಿಡೀ ದಿನ ಬೇಕು' ಎಂದು ಅಹೋಬಿಲಕ್ಕೆ ಹೋದಾಗ ನಮಗೆ ಮಾರ್ಗದರ್ಶಿಯಾಗಿದ್ದ ಶ್ರೀನಿವಾಸ್ ಹೇಳಿದರು. ಅವರ ಮಾತಿನಲ್ಲೇ, ಆ ಪ್ರವಾಸಿ ತಾಣದ ಅಗಾಧತೆಯ ಸೂಚನೆ ಇದ್ದಂತಿತ್ತು. 'ಮೊದಲು ಸ್ವಲ್ಪ ಕಷ್ಟದ, ದೂರದ ಪ್ರಯಾಣ ಮುಗಿಸಿಬಿಡಿ. ನಂತರ ಸುತ್ತಮುತ್ತಲಿನ ಕ್ಷೇತ್ರಗಳನ್ನು ಸಮಯದ ಅನುಕೂಲಕ್ಕೆ ತಕ್ಕಂತೆ ನೋಡಬಹುದು' ಎಂದು ಸಲಹೆ ನೀಡಿದರು.

ಅಹೋಬಿಲ ನರಸಿಂಹ ಆರಾಧನೆಯ ಕ್ಷೇತ್ರ. ಆರಂಭದಲ್ಲಿ ಒಂದು ವರ್ಗದವರು ಮಾತ್ರ ಹೆಚ್ಚಾಗಿ ಸಂದರ್ಶಿಸುತ್ತಿದ್ದ ಈ ಸ್ಥಳ ಈಗ ಪ್ರವಾಸಿಸ್ಥಳದ ರಂಗು ಪಡೆದುಕೊಳ್ಳುತ್ತಿದೆ. ದಟ್ಟ ಕಾಡಿನ ನಡುವೆ ಇರುವ ನವ ನರಸಿಂಹ ಕ್ಷೇತ್ರಗಳೇ ಇಲ್ಲಿಯ ಆಕರ್ಷಣೆ. ಭಕ್ತ ಪ್ರಹ್ಲಾದನಿಗೆ ಮಹಾವಿಷ್ಣು ಒಲಿದು, ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ಸ್ಥಳವಿದು ಎನ್ನುವ ಪೌರಾಣಿಕ ಕಥೆ ಇದೆ. 'ಅಹೋಬಿಲದಿಂದ ಕಾಳಹಸ್ತಿಯವರೆಗೆ ಗುಡ್ಡಶ್ರೇಣಿಗಳು ಮಲಗಿದ ಆದಿಶೇಷನಂತೆ ಕಾಣುತ್ತದೆ' ಎನ್ನುವ ವಿವರಣೆ ಅಹೋರಾತ್ರ ಅವರ 'ಗಗನ ಗೋಚರಿ ವಸುಂಧರಾ' ಕೃತಿಯಲ್ಲಿದೆ. ಆ ಬಣ್ಣನೆಯನ್ನು ಓದಿದ ನಂತರವೇ ಅಹೋಬಿಲಕ್ಕೆ ಹೋಗಬೇಕು ಅನ್ನಿಸಿದ್ದು.

ಬೆಂಗಳೂರಿನಿಂದ ರಾಯಲ್ ಎನ್‌ಫೀಲ್ಡ್‌ನಲ್ಲಿ ಒಂಟಿ ಪ್ರಯಾಣಕ್ಕೆ ಕೈ ಹಾಕಿದಾಗ ಮುಖ್ಯ ಗುರಿಯಾಗಿದ್ದುದು ಅಹೋಬಿಲವೇ. ಪುಟ್ಟಪರ್ತಿಯಲ್ಲಿ ತಂಗಿದರೆ, ಅಲ್ಲಿಂದ ಅಹೋಬಿಲಕ್ಕೆ ಮೂರು ಗಂಟೆಯ ಪಯಣ. ಸಮೀಪದ ಪಟ್ಟಣ ಪ್ರದೇಶ ಅಲ್ಲಗಡ್ಡ. ಅಹೋಬಿಲದಲ್ಲಿ ವಸತಿ ಸಮಸ್ಯೆ ಇದೆ. ಹಾಗಾಗಿ ಅಲ್ಲಗಡ್ಡದಲ್ಲಿಯೇ ಹೆಚ್ಚಿನವರು ವಸತಿ ಮಾಡಿಕೊಳ್ಳುತ್ತಾರೆ.

ಪೆದ್ದ ಅಹೋಬಿಲಂ ಮತ್ತು ಚಿನ್ನ ಅಹೋಬಿಲಂ